ಫೋನ್ ಮಾಡಿ...'

'ಬೇಡ... ಬೇಡ.' ಸಣ್ಣ ಸ್ವರದಲ್ಲಿ ಆದರೆ ಕಠಿಣವಾಗಿ ಗದರಿಸಿದನು ಮಿಜ್ರಾಡಿನ್. 'ಎಷ್ಟು ತುರ್ತಿನ ವಿಷಯವಾಗಿದ್ದರೂ ಸರಿ ನನಗಾಗಲೀ, ಮೇಜರ್‌ಗಾಗಲೀ ಫೋನ್ ಮಾಡಬೇಡ. ಪೊಲೀಸರು ನಮ್ಮೆಲ್ಲರ ಫೋನ್‌ಗಳನ್ನು ಟ್ರೇಸ್ ಮಾಡುತ್ತಾ ಇದ್ದಾರೆ'

ಅರ್ಥವಾದ ಹಾಗೆ ತಲೆಯಾಡಿಸಿದನು ಹಲ್ತಾಫ್.

'ತಿಂಗಳಲ್ಲಿ ಹತ್ತು ಮಂದಿ ಜಿಹಾದಿಗಳನ್ನು ಸಾಯಿಸಿದ್ದಾರೆ. ಅಂದರೆ ಈ ರಾಜ್ಯದಲ್ಲಿ ನಮಗೆ ವಿರುದ್ಧವಾಗಿ ಒಬ್ಬ ಪೊಲೀಸ್ ಇನ್ಫಾರ್ಮರ್ ಇದ್ದಾನೆ ಅಂದ ಹಾಗಾಯ್ತು. ಇಲ್ಲದಿದ್ದರೆ ನಮಗಿಷ್ಟು ದೊಡ್ಡ ನಷ್ಟವೇ ಆಗ್ತಿರಲಿಲ್ಲ'

'ಒಂದು ತಿಂಗಳು ಟೈಂ ಕೊಡಿ ಭಾಯ್. ಅವನು ಎಲ್ಲೇ ಇದ್ದರೂ ಹುಡುಕಿ ಸಾಯಿಸ್ತೇವೆ'

'ಬೇಡ, ಬೇಡ, ಅವನನ್ನು ಸಾಯಿಸಬಾರದು. ಜೀವಂತವಾಗಿ ಹಿಡಿದು ಚಿತ್ರಹಿಂಸೆ ಕೊಟ್ಟು ಉಳಿದ ಇನ್‌ಫಾರ್ಮರ್‌ಗಳ ವಿವರಗಳನ್ನು ಕಕ್ಕಿಸಬೇಕು. ಇಡೀ ನೆಟ್‌ವರ್ಕ್‌ನ ನಾಶ ಮಾಡಬೇಕು. ಎಲ್ಲಾ ನಾನು ನೋಡಿಕೊಳ್ತೇನೆ, ಖುದಾ ಹಾಫೀಜ್'

ರೈಲು ಖಾಜೀಪೇಟೆ ತಲುಪಿತು. ಹಲ್ತಾಫ್ ಇಳಿದು ಹೋದನು.

ಎದುರಿನಲ್ಲಿ ಕುಳಿತಿದ್ದ ಹುಡುಗಿಯರು ಹೊಸ ಗೇಮ್ ಆರಂಭಿಸಿದ್ದರು. ಐಐಟಿ ವಿದ್ಯಾರ್ಥಿಗಳಾದ್ದರಿಂದ ಅಂತ್ಯಾಕ್ಷರಿ ಆಡದೆ ಹೊಸ ರೀತಿ ಆಟ ಆಡುತ್ತಿದ್ದರು. ಒಬ್ಬ ಹುಡುಗ ಪಜಲ್ ಹೇಳಿದರೆ ಉಳಿದವರು ಅದನ್ನು ಬಿಡಿಸಿ ಉತ್ತರ ಹೇಳಬೇಕು.

'ರವಿ ಒಬ್ಬ ಗೈಡ್, ಪ್ರವಾಸಿಗಳನ್ನು ಅಂಡಮಾನ್ ದ್ವೀಪದ ಕಡೆಗೆ ಕರೆದೊಯ್ಯುತ್ತಿರುತ್ತಾನೆ. ಪ್ರಯಾಣ ಆರಂಭವಾದ ದಿನದಿಂದ ಆ ಹಡಗಿನಲ್ಲಿ ಒಬ್ಬ ಕುಡುಕ ತೊಂದರೆ ಕೊಡುತ್ತಲೇ ಇದ್ದನು. ದೂರದಲ್ಲಿ ಕಾಣಿಸುತ್ತಿದ್ದ ಒಂದು ದ್ವೀಪವನ್ನು ತೋರಿಸಿ ಅಲ್ಲಿಗೆ ಕರೆದೊಯ್ಯಲು ಹೇಳಿದನು. 'ಅಲ್ಲಿ ನರಮಾಂಸ ಭಕ್ಷಕರಿದ್ದಾರೆ' ಎಂದು ಎಷ್ಟು ಹೇಳಿದರೂ ಕೇಳಲಿಲ್ಲ. ಬಹಳ ರಂಪಾಟ ಮಾಡಿದನು. ಆ ಹಡಗಿನಲ್ಲಿ ಇನ್ನೊಂದು ತಿಂಗಳಲ್ಲಿ ರಾಷ್ಟ್ರಪತಿ ಪದಕ ಸ್ವೀಕರಿಸಲಿದ್ದ ಒಬ್ಬ ವೃದ್ಧ ಸೈನಿಕ, ಅಟಾನಿಕ್ ರಿಸರ್ಚ್ ಚೇರ್ಮನ್, ಹೊಸದಾಗಿ ಮದುವೆಯಾದ ದಂಪತಿ, ಶಾಲಾ ವಿದ್ಯಾರ್ಥಿಗಳು, ಈ ರೀತಿ ವಿವಿಧ ವ್ಯಕ್ತಿಗಳಿದ್ದರು. ಬೇರೇನೂ ತೋಚದ ರವಿ, ತನ್ನ ಯಜಮಾನನಿಗೆ ಫೋನ್ ಮಾಡಿದನು. ಪ್ರತಿಯೊಬ್ಬರೂ ಸಾವಿರ ರೂಪಾಯಿ ಕೊಟ್ಟರೆ ಕರೆದುಕೊಂಡು ಹೋಗು ಎಂದನು ಯಜಮಾನ. ಅವರೆಲ್ಲ ಅದಕ್ಕೆ ಒಪ್ಪಿಕೊಂಡರು. ದ್ವೀಪ ಪ್ರವೇಶಿಸಿದ ಕೂಡಲೆ ಕ್ಯಾನಿಬಾಲ್ಸ್ ಅವರನ್ನು ಬಂಧಿಸಿ, ಬೆಂಕಿ ಹೊತ್ತಿಸಿದರು. ರವಿ ಅವರ ಜೊತೆ ವಾದಿಸಿದನು, ಬೇಡಿಕೊಂಡನು. ಕೊನೆಗೆ ನರಮಾಂಸ ಭಕ್ಷಕನ ನಾಯಕನು 'ಒಬ್ಬನನ್ನು ಆಹಾರವಾಗಿ ಒಪ್ಪಿಸಿದರೆ ಉಳಿದವರನ್ನು ಬಿಡುವುದಾಗಿ' ಹೇಳಿದನು. ಈಗ ಪ್ರಶ್ನೆ 'ಯಾರನ್ನು ಒಪ್ಪಿಸಬೇಕು' ಎನ್ನುವುದು.'

'ಕುಡುಕನನ್ನು' ಎಂದು ಕೂಗಿದರು ಎಲ್ಲರೂ. 'ಸರಿ' ಎನ್ನುವಂತೆ ಯುವಕ ತಲೆಯಾಡಿಸಿದನು.

'ಅಲ್ಲ, ರವಿಯನ್ನು' ಎಂದಳು ಕಲ್ಯಾಣಿ. ಒಮ್ಮೆಲೇ ಅಲ್ಲಿ ನಿಶ್ಯಬ್ದ ಆವರಿಸಿತು.

'ಹೌದು, ಅವರೆಲ್ಲರೂ ಅವನನ್ನು ಬಲವಂತಪಡಿಸಿದ್ದು ನಿಜವೇ. ಆದರೆ ಯಾವಾಗ ಪ್ರವಾಸಿಗಳಿಂದ ದುಡ್ಡು ತೆಗೆದುಕೊಂಡನೋ ಆಗ ಅವರೆಲ್ಲರ ರಕ್ಷಣೆಯ ಜವಾಬ್ದಾರಿ ಅವನದಾಯಿತು.'

'ಅವನು ದುಡ್ಡು ತೆಗೆದುಕೊಳ್ಳಲಿಲ್ಲ, ಯಜಮಾನ ತೆಗೆದುಕೊಂಡ' ಎಂದು ಒಬ್ಬ ಕಿರಿಯ ವಾದಿಸಿದನು.

'ರವಿ ಯಜಮಾನನ ಪ್ರತಿನಿಧಿ, ಆದ್ದರಿಂದ ಅವನೂ ಕಾಂಟ್ರಾಕ್ಟ್‌ನಲ್ಲಿ ಪಾಲುದಾರನೇ'

'ಮತ್ತೆ ಮರ್ಕಂಟೈಲ್ ಲಾ ಶುರು ಮಾಡ್ಬೇಡ. ಅವನು ಬೇಡ ಬೇಡ ಎಂದರೂ ಬಲವಂತದಿಂದ ಕರೆದುಕೊಂಡು ಹೋದವರು ಆ ಟೂರಿಸ್ಟ್‌ಗಳು'

'ಹಾಗಾದರೆ ಅವರನ್ನೆಲ್ಲ ಆ ನರಭಕ್ಷಕರಿಗೆ ಕೊಡಬೇಕು, ಬರೀ ಕುಡುಕನನ್ನಲ್ಲ' ಎಂದಳು ಕಲ್ಯಾಣಿ.

ಹೇಗೆ ವಾದ ಮಾಡಬೇಕೋ ಉಳಿದವರಿಗೆ ತಿಳಿಯಲಿಲ್ಲ. ಆಗ ಪಕ್ಕದಿಂದ 'ಗೈಡ್‌ನ ಸಹಾಯ ಇಲ್ಲದಿದ್ದರೆ ಅವರೆಲ್ಲ ಹೇಗೆ ವಾಪಸ್ಸು ಬರುತ್ತಾರೆ?' ಎಂದ ಮಾತು ಕೇಳಿ ಎಲ್ಲರೂ ಅತ್ತ ನೋಡಿದರು.

ಆ ಮಾತು ಹೇಳಿದ್ದು ಮಿಜ್ರಾಡಿನ್.

ತಮ್ಮ ವಾದವನ್ನು ಬಲಪಡಿಸಿದ ಆ ಮಾತಿಗೆ ಹುಡುಗರು ಚಪ್ಪಾಳೆ ತಟ್ಟಿದರು.

ಆಗ ನೋಡಿದಳು ಅವನನ್ನು. ಅವಳ ತಂದೆಯ ವಯಸ್ಸಿರಬಹುದು. ಸಣ್ಣಗೆ, ಉದ್ದಕ್ಕೆ ಇದ್ದಾನೆ. ಅವಳನ್ನು ನೋಡಿ ನಸು ನಕ್ಕನು. ಅವಳು ನಗಲಿಲ್ಲ., ಅವನ ಮುಖವನ್ನು ನೇರವಾಗಿ ನೋಡುತ್ತ 'ಅವನು ನಾವಿಕನಲ್ಲ, ಗೈಡ್ ಮಾತ್ರವೇ. ಹಡಗು ನಡೆಸುವವರು ಬೇರೆ ಇರುತ್ತಾರೆ. ಅವರು ವಾಪಸ್ ಕರೆದುಕೊಂಡು ಹೋಗುತ್ತಾರೆ. ನಾಯಕ ಸ್ವತಃ ಆದರ್ಶ ಪಾಲಿಸಬೇಕು. ಅನುಚರರನ್ನು ಮುಂದಕ್ಕೆ ತಳ್ಳಿ ತಾವು ಹಿಂದೆ ನಿಲ್ಲಬಾರದು' ಎಂದಳು.

'ಆಗ ಮಿಜ್ರಾಡಿನ್ 'ರಾಜನು ಯುದ್ಧ ಮಾಡುವುದಿಲ್ಲ, ಹಿಂದೆ ನಿಂತು ಮಾಡಿಸುತ್ತಾರೆ' ಎಂದನು ನಗುತ್ತಾ.

'ಕ್ರಾಂತಿಕಾರರು ಹೇಳುವ ಬದನೆಕಾಯಿ ಪುರಾಣ ಹೇಳುತ್ತಿದ್ದೀರಿ ನೀವು. ತಾವು ಹಬ್ಬ ಮಾಡುವುದಕ್ಕೆ ನಾಯಕರು ಹೋರಾಟ ಮಾಡಿಸುತ್ತಾರೆ. ವಿಶಾಖಪಟ್ಟಣ ಸ್ಟೀಲ್ ಪ್ಲಾಂಟ್‌ಗಾಗಿ ಹೋರಾಟ ಮಾಡಿದ ಯಾವೊಬ್ಬ ವಿದ್ಯಾರ್ಥಿಗೂ ಅಲ್ಲಿ ನೌಕರಿ ಸಿಗಲಿಲ್ಲ. ತೆಲ್ಲಂಗಾಣ ಹೋರಾಟದಲ್ಲಿ ಪಾಲ್ಗೊಂಡ ಅದೆಷ್ಟೋ ಮಂದಿ ಕೇಸ್ ಮಾಫಿಗಾಗಿ ಇನ್ನೂ ಸುತ್ತುತ್ತಿದ್ದಾರೆ. ನಾಯಕರು ಮಾತ್ರ ಪ್ರಜಾಪ್ರತಿನಿಧಿಗಳೂ, ಮಂತ್ರಿಗಳೂ ಆದರು' ಎಂದಳು.

## ಚೆಲ್ಲಾಪಿಲ್ಲಿ

ದೇವಾಲಯದ ದಾರಿಯಾದ್ಯಂತ
ಚೆಲ್ಲಾಪಿಲ್ಲಿ ಆಗಿದ್ದವು
ಹರಕೆಗಳು.

## ತುಂಬುವಿಕೆ

ಖಾಲಿ ಚಹಾ ಕಪ್
ತುಂಬಿತ್ತು
ಬೆಳದಿಂಗಳಿಂದ.

## ಚುಚ್ಚುವಿಕೆ

ಚಿಟ್ಟೆಯ ರೆಕ್ಕೆಯಲ್ಲಿ
ಹಚ್ಚೆ ಚುಚ್ಚುತ್ತಿದೆ
ಮಂಜಿನ ಹನಿ.

## ಬೀಳುವಿಕೆ

ಕಲ್ಲು ಎಸೆಯಬೇಕಿಲ್ಲ
ಬೀಳುತ್ತದೆ
ಮರದಿಂದ ನೆರಳು.

■ ಡಾ. ವಿ. ಪುಗಳೇಂದಿ

